# ಅಂಚೆ ಮತ್ತು ತೆರಪಿನ ಶಿಕ್ಷಣ
# ಪ್ರಥಮ ಬಿ.ಬಿ.ಎಂ. ಪದವಿ ಪರೀಕ್ಷೆ,
# ಆಗಸ್ಟ್/ಸೆಪ್ಟೆಂಬರ್ 2010

ಕನ್ನಡ ಭಾಷಾ ಪತ್ರಿಕೆ - ೧

(ಪಠ್ಯಗಳು : ಪ್ರಾಚೀನ ಕನ್ನಡ ಕಾವ್ಯ - ೨, ಹೊಸಗನ್ನಡ ಕಾವ್ಯ - ೨
ಹೊಸಗನ್ನಡ ಕಥಾಸಾಹಿತ್ಯ - ೧, ಹೊಸಗನ್ನಡ ಪ್ರಬಂಧ ಸಾಹಿತ್ಯ - ೧)

ಬಳಕೆಯ ಭಾಷೆ

(ಹೊಸಬರಿಗೆ)

ಅವಧಿ : *3* ಗಂಟೆಗಳು.] [ಅಂಕಗಳು: *80*

1. ಅ) **ಒಂದರ** ಭಾವ ಸ್ವಾರಸ್ಯವನ್ನು ಸಂದರ್ಭದೊಡನೆ ವಿವರಿಸಿ. 7 ಅಂಕಗಳು

೧) ಜನಕಂಗೆ ತಿಲಾಂಜಲಿಯಂ
ತನೂಭವಂ ಕುಡುವುದುಚಿತಮದಗೆಟ್ಟೀಗಳ್
ನಿನಗಾಂ ಕುಡುವಂತಾದುದೆ
ತನೂಜಾ ನೀಂ ಕ್ರಮವಿಪರ್ಯಂ ಮಾಡುವುದೇ

೨) ಅರಿಯದು ಅಳವು ತಿಳಿಯದು ಮನವು
ಕಾಣದೋ ಬಣ್ಣಾ
ಕಣ್ಣಿಗೆ ಕಾಣದೋ ಬಣ್ಣಾ
ಶಾಂತೀ ರಸವೇ ಪ್ರೀತಿಯಿಂದಾ
ಮೈದೋರಿತಣ್ಣಾ
ಇದು ಬರೀ -ಬೆಳಗಲ್ಲೋ ಅಣ್ಣಾ

ಆ) **ಎಂಟು** ಪದಗಳಿಗೆ ಅರ್ಥ ಬರೆಯಿರಿ. 4 ಅಂಕಗಳು

ಖಗ, ದೀಪ್ತಿ, ಬತ್ತಾಯ, ಗೇಹ, ವಸುಧೆ, ಭವ, ದ್ವಿಜ, ಅಣ್ಮು, ಹರಿಣ, ತೃಷೆ, ಮಾತಂಗ, ತವರಾಜ

ಇ) **ಎರಡಕ್ಕೆ** ಟಿಪ್ಪಣಿ ಬರೆಯಿರಿ. 4 ಅಂಕಗಳು

೧) ಅಭಿಮನ್ಯು ೨) ಚಂಡಮಾರಿ ೩) ಚೆನ್ನಮಲ್ಲಿಕಾರ್ಜುನ

2. **ಐದಕ್ಕೆ** ಸಂದರ್ಭಸೂಚಿಸಿ ಸ್ವಾರಸ್ಯ ಬರೆಯಿರಿ. 3×5=15 ಅಂಕಗಳು

೧) ಅನೃತಂ ಲೋಭಂ ಭಯಮೆಂಬಿನಿತುಂ ನೀನಿರ್ದ ನಾಡೊಳಿರ್ಕುಮೆ.

೨) ಪಾಪಕಳಾ ಪಂಡಿತೆ ಚಂಡಮಾರಿ ದೇವತೆ ಇರ್ಪಳ್

೩) ಪೊಡವಿಪಂ ಸತಿ-ಸುತರ ತಲೆಗಳಲ್ಲಿ ಹುಲುಗಟ್ಟಿ

೪) ಮನ ಬಂದುದನು ಬಯಸಿ ಬೇವುತ್ತಿದ್ದೆನಯ್ಯಾ

೫) ಇದ್ದವರಿಗೊಂದು ಮನೆ, ಇಲ್ಲದವರಿಗೆ ನೂರು

೬) ದೇವರ್ ತಾಕ್ ನಾನ್ ಒಯ್ಯಾಕಿಲ್ಲ ಅಣ್ಣಾ ಕಾಯಿ ದೂಪ ?

೭) ಕಾಮನ ಬಿಲ್ಲು ಚಂದವಾದಂತೆ ನೀ ಬಾಳಿ ಬಿಟ್ಟೆ;

೮) ಮಾಳಿಗೆಗಳ ಎತ್ತಿದೋರು ಬಂಗಲೆಗಳ ಕಟ್ಟಿದೋರು

ಮುಂದುವರೆದಿದೆ.... 2

3. 'ಹರಿಶ್ಚಂದ್ರ ಕಾವ್ಯ'ದ ಮೂಲಕ ಕವಿ ತಿಳಿಸಬಯಸಿರುವ ಮೌಲ್ಯಗಳನ್ನು ಕುರಿತು ಬರೆಯಿರಿ. 10 ಅಂಕಗಳು

**ಅಥವಾ**

ಹಿಂಸೆಯ ಎದುರು ಅಹಿಂಸಾ ತತ್ವವು ಪಡೆದ ಯಶಸ್ಸನ್ನು ಕುರಿತು ವಿವೇಚಿಸಿರಿ.

4. ಕರುಣೆ ಮತ್ತು ಒಲುಮೆಯನ್ನು 'ನನ್ನ ನಾಯಿ' ಕವನದಲ್ಲಿ ಹೇಗೆ ತುಲನೆ ಮಾಡಲಾಗಿದೆ? ವಿವರಿಸಿ. 10 ಅಂಕಗಳು

**ಅಥವಾ**

'ರಂಗೋಲಿ ಮತ್ತು ಮಗ' ಕವಿತೆಯಲ್ಲಿ ಕವನದ ನಾಯಕ ಎದುರಿಸಿದ ಪೇಚಾಟವನ್ನು ವಿವರಿಸಿ.

5. 'ಅಬಚೂರಿನ ಪೋಸ್ಟಾಫೀಸು' ಕಥೆ ಬೋಬಣ್ಣನ ಅತೃಪ್ತ ಬದುಕಿನ ವೈಯಕ್ತಿಕ ದುರಂತ ಚಿತ್ರಣವನ್ನು ಹೇಗೆ ಚಿತ್ರಿಸುತ್ತದೆ ? ವಿವರಿಸಿ. 10 ಅಂಕಗಳು

**ಅಥವಾ**

ಮೆಹರುನ್ನೀಸಳ ಬದುಕೇ ಒಂದು 'ಇದ್ದತ್' ಹೇಗೆ ? ವಿವರಿಸಿ.

6. 'ಚಿಲಿಪಿಲಿಗಾನ'ಕ್ಕೆ ಬೆಲೆ ಕೊಡಬೇಕಾದುದು ಏಕೆ ? ಚರ್ಚಿಸಿ. 10 ಅಂಕಗಳು

**ಅಥವಾ**

'ಜಾತಿ ಎನ್ನುವುದು ದೈಹಿಕಹಿಂಸೆ'ಯ ಸ್ವರೂಪ ದಾಟಿ ಸೂಕ್ಷ್ಮಸ್ತರದಲ್ಲಿ ಹರಡಿರುವ ಬಗೆಯನ್ನು ಚಂದ್ರಶೇಖರ್ ಆಲೂರರು ವಿವರಿಸುವ ಬಗೆ ಹೇಗೆ ? ವಿವರಿಸಿ.

7. ಅ) 'ವಾಣಿಜ್ಯ ವರದಿ' ಎಂದರೇನು ? ಅವುಗಳ ಬಗೆಗಳಾವುವು ? 2 ಅಂಕಗಳು

ಆ) ಆಯಾತ-ನಿರ್ಯಾತ ಎಂದರೇನು ? ಇವು ನಿರ್ವಹಿಸುವ ಸಂಸ್ಥೆಗಳು ಯಾವುವು ? 3 ಅಂಕಗಳು

8. ಅ) ಗಾದೆಗಳು ಎಂದರೇನು ? ಉದಾಹರಿಸಿ. 2 ಅಂಕಗಳು

ಆ) ಪ್ರಬಂಧ ಎಂದರೇನು ? ವಿವರಿಸಿ. 3 ಅಂಕಗಳು

* ** *